**ದಿನಾಂಕಃ 04-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಸ್ ವಿ ಎ **ವಕೀಲರಿಂದ**

ಮಾದಶ್ತಿಗೌಡ ನನ್ನ ಗಂಡ. ಸದರಿ ದಾವೆಯನ್ನು ನಮ್ಮ ಯಜಮಾನರು ಜೀವಂತ ಇರುವ ಕಾಲದಲ್ಲಿ ಹಾಕಿದ್ದು, ಅವರ ಆರೋಗ್ಯ ಸರಿ ಇಲ್ಲದ ಕಾರಣ ನಾನು ಜಿ ಪಿ ಎ ಹೋಲ್ಡರ್ ಆಗಿ ಸದರಿ ದಾವೆಯಲ್ಲಿ ಸೇರ್ಪಡೆ ಆಗಿರುತ್ತೇನೆ. ನಮ್ಮ ಮಾವನಿಗೆ 5 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಮೊದಲನೇಯವರು ನನ್ನ ಗಂಡ 2ನೇಯವರು ಪ್ರತಿವಾದಿಯ ತಂದೆ ಕೃಷ್ಣಪ್ಪ, 3ನೇಯವರು ಈಶ್ವರಪ್ಪ, 4ನೇಯವರು ಗೋವಿಂದಪ್ಪ ಅಲಿಯಾಸ್ ಗೋವಿಂದ, ಹೆಣ್ಣುಮಕ್ಕಳು ಗೌರಮ್ಮ, ಜಯಮ್ಮ ಇನ್ನೊಬ್ಬರು ಉಗ್ರಯ್ಯ. ನನ್ನ ಗಂಡನ ತಂದೆಯವರ ಆಸ್ತಿಯನ್ನು ಅವರ ಅಣ್ಣ ತಮ್ಮಂದಿರು, ಅಕ್ಕ ತಮ್ಮಂದಿರು ಭಾಗ ಮಾಡಿಕೊಂಡಿರುತ್ತಾರೆ. ಆದರೆ ನನ್ನ ಗಂಡ ಅವರ ತಂದೆ ಆಸ್ತಿಯಲ್ಲಿ ಪಾಲನ್ನು ಪಡೆದುಕೊಂಡಿರುವುದಿಲ್ಲ. ದಾವ ಆಸ್ತಿಯನ್ನು ನಿಮ್ಮ ಯಜಮಾನರು ಯಾವಾಗ ಕೊಂಡುಕೊಂಡಿರುತ್ತಾರೆಂದರೆ ಸಾಕ್ಷಿ ಅದು ಸರ್ಕಾರಿ ಜಮೀನು ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಾವು ದಾವೆಯನ್ನು ಸರ್ಕಾರಿ ಜಮೀನಿನ ಸರ್ವೆ ನಂ.52 ರ ಮೇಲೆ ದಾವೆಯನ್ನು ಹೂಡಿರುತ್ತೇವೆ. ದಾವ ಆಸ್ತಿಯ ಅಸಸ್ ಮೆಂಟ್ ನ್ನು ಯಾವ ಸರ್ವೇ ನಂಬರ್ ನಲ್ಲಿ ನೀಡಿರುತ್ತಾರೆ ಎಂದರೆ ಸಾಕ್ಷಿ ಸರ್ವೆ ನಂ.52 ರಲ್ಲಿ ನೀಡಿರುತ್ತಾರೆಂದು ನುಡಿದಿರುತ್ತಾರೆ. ವಾದ ಪತ್ರದ ಷೆಡ್ಯೂಲ್ ನಲ್ಲಿ ಸರ್ವೇ ನಂ.52 ಎಂದು ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿ ನಾವು ನ್ಯಾಯಾಲಯಕ್ಕೆ ಸರ್ವೇ ನಂ.52 ರ ದಾಖಲಾತಿಯನ್ನು ತಹಶೀಲ್ದಾರ್ ನೀಡಿರುವ ಬಗ್ಗೆ ಹಾಜರುಪಡಿಸಿದ್ದೇವೆ ಎಂದು ನುಡಿದಿರುತ್ತಾರೆ. ಸರ್ವೆ ನಂ.52 ನಿಮ್ಮ ಹೆಸರಿಗೆ ಆಗಿರುವ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇವೆ ಎಂದು ನುಡಿದಿರುತ್ತಾರೆ.

ನೀವು ಸರ್ವೆ ನಂ.52 ಕ್ಕೆ ಸಂಬಂಧಪಟ್ಟ ಫಾರಂ ನಂ..53 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.52 ರಲ್ಲಿ ಯಾವುದೇ ಜಾಗ ನಿಮಗೆ ಮಂಜೂರು ಆಗಿರುವುದಿಲ್ಲ ಎಂದರೆ ಸಾಕ್ಷಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ದಾವೆಯನ್ನು ಸರ್ವೆ

ನಂ.52 ರಲ್ಲಿ 35 ಗುಂಟೆ ಸ್ವಾಧೀನದಲ್ಲಿರುವ ಬಗ್ಗೆ ದಾವೆಯಲ್ಲಿ ಸ್ಕೆಚ್ಚನ್ನು ಹಾಜರುಪಡಿಸಿರುತ್ತೇವೆ. ಸರ್ವೆ ನಂ.52 ರ 35 ಗುಂಟೆ ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ನಂ.167 ರಲ್ಲಿ ನನ್ನ ಮತ್ತು ನನ್ನ ಗಂಡನ ಜಂಟಿ ಖಾತೆ ಆಗಿ 35 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.167 ನ್ನು ಲಕ್ಷ್ಮಣಯ್ಯ ಎಂಬುವವರಿಂದ ಖರೀದಿ ಮಾಡಿದ್ದು, ಅದರಲ್ಲಿ ನಾವು ಈಗ 35 ಗುಂಟೆಯಲ್ಲಿ ಸ್ವಾಧೀನದಲ್ಲಿರುತ್ತೇವೆ. ಸರ್ವೆ ನಂ.167 ರಲ್ಲಿ 3 ಎಕರೆ 35 ಗುಂಟೆ ಇದ್ದು, ಅದರಲ್ಲಿ 3 ಎಕರೆಯನ್ನು ನನ್ನ ಮೂರು ಗಂಡು ಮಕ್ಕಳಿಗೆ ತಲಾ 1 ಎಕರೆ ಯಂತೆ ಭಾಗ ಮಾಡಿ ಕೊಟ್ಟಿರುತ್ತೇವೆ. ನೀವು ಸರ್ವೆ ನಂ.167 ರ ಅಸಸ್ ಮೆಂಟ್ ತೋರಿಸಿ ಪಂಚಾಯಿತಿಯಿಂದ ಸರ್ವೆ ನಂ.52 ಕ್ಕೆ ಅಸಸ್ ಮೆಂಟ್ ನ್ನು ಪಡೆದಿರುತ್ತೀರಾ ಎಂದರೆ ಸರಿಯಲ್ಲ. ನಾನು ಓ ಎಸ್ 293/2019 ರಲ್ಲಿ ಗೋವಿಂದಯ್ಯನವರ ಮೇಲೆ ಸರ್ವೆ ನಂ.167/1 ರಲ್ಲಿ 13 ಗುಂಟೆ ಒತ್ತುವರಿ ಮಾಡಿರುವ ಬಗ್ಗೆ ದಾವೆಯನ್ನು ಹೂಡಿರುತ್ತೇನೆ. ಸಾಕ್ಷಿಗೆ ಓ ಎಸ್ 293/2019 ರ ದಾಖಲಾತಿಯನ್ನು ತೋರಿಸಲಾಗಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ವಾದ ಪತ್ರವನ್ನು ನಿಡಿ-1 ಎಂದು, ಪ್ರತಿವಾದ ಪತ್ರ ನಿಡಿ-2, ಮಧ್ಯಂತರ ಅರ್ಜಿ ಯನ್ನು ನಿಡಿ-3 ಎಂದು, ಸೇಲ್ ಡೀಡ್ ನ್ನು ನಿಡಿ-4 ಎಂದು, ರೈಟ್ಸ್ ಆಫ್ ರೆಕಾರ್ಡ ನಿಡಿ-5, ಪಹಣಿಗಳನ್ನು ನಿಡಿ-6 ಎಂದು, ಸರ್ವೆ ನಂ.167 ರ ಸ್ಕೆಚ್, ಹೇಳಿಕೆ, ನೋಟೀಸು, ಅಳತೆ ವರದಿಯನ್ನು ನಿಡಿ-7 ರಿಂದ 10 ಎಂದು, ಎರಡು ಎಂ ಆರ್ ಗಳನ್ನು ನಿಡಿ-11 ಮತ್ತು ನಿಡಿ-12, ಆಕಾರ್ ಬಂದ್ ನ್ನು ನಿಡಿ-13 ಎಂದು ಗುರುತಿಸಲಾಯಿತು. ಸಾಕ್ಷಿಯು ಮೂರು ಛಾಯಚಿತ್ರಗಳನ್ನು ಗುರುತಿಸಿರುತ್ತಾರೆ. ಸಾಕ್ಷಿಯು ಛಾಯಚಿತ್ರದಲ್ಲಿರುವ ಹಂಚಿನ ಮನೆಯು ಕೃಷ್ಣಪ್ಪನವರದ್ದು ಎಂದು ತಿಳಿಸಿರುತ್ತಾರೆ. ಕೃಷ್ಣಪ್ಪನವರ ಮಗಳು ಪ್ರತಿವಾದಿಯಾಗಿರುತ್ತಾರೆಂದರೆ ಸರಿ. ಕೃಷ್ಣಪ್ಪನವರು 1973 ನೇ ಇಸವಿಯಿಂದ ಅವರ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ. ಸಾಕ್ಷಿಯು ಮುಂದುವರಿದು ನಾವು ಸಹ 1973 ನೇ ಇಸವಿಯಿಂದ ನಮ್ಮ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಛಾಯಚಿತ್ರದಲ್ಲಿ ಕೃಷ್ಣಪ್ಪನವರು ಜಾಗ ಸರ್ವೆ ನಂ.52 ಆಗಿರುತ್ತದೆ ಎಂದು ನುಡಿದಿದ್ದು, ನಾವು ಸಹ ಸರ್ವೆ ನಂ.52 ರಲ್ಲೇ ವಾಸವಾಗಿದ್ದೇವೆ ಎಂದು ನುಡಿದಿರುತ್ತಾರೆ.

ಸರ್ವೆ ನಂ.52 ರಲ್ಲಿ 1 ಎಕರೆ ಜಮೀನಿನಲ್ಲಿ ವಾಸವಾಗಿದ್ದು, ನಾವು 35 ಗುಂಟೆ ಜಮೀನಿನಲ್ಲಿ ವಾಸವಾಗಿರುತ್ತೇವೆ ಎಂದು ನುಡಿದಿರುತ್ತಾರೆ. ನಿಪಿ-40 ರಲ್ಲಿ ಕಾಣಿಸುವ ಹಂಚಿನ ಮನೆ ನಮ್ಮದು, ನಿಪಿ-41 ರಲ್ಲಿರುವ ಮನೆ ಪ್ರತಿವಾದಿಗಳಾದ್ದಗಿರುತ್ತದೆ. ನೀವು ಸರ್ವೆ ನಂ.52 ರಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ನಾವು ಸರ್ವೆ ನಂ.52 ರಲ್ಲಿ ಸ್ವಾಧೀನದಲ್ಲಿರುತ್ತೇವೆ, ಪಂಚಾಯಿತಿಯವರು ಅಸಸ್ ಮೆಂಟ್ ನ್ನು ನೀಡಿರುತ್ತಾರೆ, ನಾವು ಕಂದಾಯವನ್ನು ಸಹ ಕಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ನಿಮಗೆ ಗ್ರಾಮ ಪಂಚಾಯಿತಿಯವರು ಸರ್ವೇ ನಂ.167 ಕ್ಕೆ ಅಸಸ್ ಮೆಂಟ್ ನೀಡಿರುತ್ತಾರೆ, ಸರ್ವೆ ನಂ.52 ಕ್ಕೆ ನೀಡಿರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ನಂ.52 ಕ್ಕೆ ನೀಡಿರುತ್ತಾರೆಂದು ನುಡಿದಿರುತ್ತಾರೆ. ಸರ್ವೆ ನಂ.52 ಈಗಲೂ ಸಹ ಸರ್ಕಾರಿ ಜಮೀನು ಆಗಿರುತ್ತದೆ ಎಂದರೆ ಸರಿ. ಸರ್ಕಾರಿ ಜಮೀನಿಗೆ ಅಸಸ್ ಮೆಂಟ್ ನೀಡಲು ಗ್ರಾಮ ಪಂಚಾಯಿತಿಯವರಿಗೆ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.52 ರಲ್ಲಿ ಪ್ರತಿವಾದಿಗಳು 1973 ರಿಂದ ಅಡಿಕೆ ಮರಗಳನ್ನು ಬೆಳೆಸಿ ತೆಂಗಿನ ತೋಟವನ್ನು ಮಾಡಿರುತ್ತಾರೆಂದರೆ ಸಾಕ್ಷಿ ಸರ್ವೆ ನಂ.52 ರಲ್ಲಿ ಪ್ರತಿವಾದಿಗಳು 1 ಎಕರೆ ಜಾಗದಲ್ಲಿ ಸ್ವಾಧೀನದಲ್ಲಿದ್ದು ನಾವು 35 ಗುಂಟೆ ಜಾಗದಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ. ನೀವು ಸರ್ವೇ ನಂ.52 ರಲ್ಲಿ ಯಾವುದೇ ಮನೆ ಇರುವುದಿಲ್ಲ, ವಾಸ ವಾಗಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೀರಾ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳು ಸರ್ವೆ ನಂ52 ಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸಾಕ್ಷಿ ಇಲ್ಲ ಸರ್ವೆ ನಂ.52 ಕ್ಕೆ ಎಲ್ಲಾ ದಾಖಾಲತಿಗಳು ಸಂಬಂಧಪಟ್ಟಿವೆ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**